660. **ಶ್ರೀ ಚನ್ನಬಸವರಾಜ್ (ಅಪ್ಪಾಜಿ):–** ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಮುದ್ದೇಬಿಹಾಳ ತಾಲ್ಲೂಕು ಅತೀ ಹಿಂದುಳಿದ ಪ್ರದೇಶವಾಗಿದ್ದು ಯಾವುದೇ ಕೈಗಾರಿಕೋದ್ಯಮವನ್ನು ಹೊಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಸಣ್ಣ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಸಣ್ಣ ಕೈಗಾರಿಕೋದ್ಯಮಿಗಳನ್ನು ಉತ್ತೇಜಿಸುವ ಸಲುವಾಗಿ ಸರ್ಕಾರವು ಕೈಗೊಂಡ ಕಾರ್ಯಕ್ರಮಗಳೇನು (ವಿವರ ನೀಡುವುದು);

(ಇ) ಮುದ್ದೇಬಿಹಾಳ ತಾಲ್ಲೂಕಿನ ತಾಳಿಕೋಟೆ ಪಟ್ಟಣ ವ್ಯಾಪ್ತಿಯಲ್ಲಿ ಹೊಸದಾಗಿ ಕೈಗಾರಿಕಾ ಕ್ಷೇತ್ರವನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೇ;

(ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಶಿವಾನಂದ ಎನ್. ನಾಯ್ಕ (ಮಾನ್ಯ ಸಣ್ಣ ಕೈಗಾರಿಕಾ ಸಚಿವರು):–

(ಅ) ಹೌದು

(ಆ) ಮುದ್ದೇಬಿಹಾಳದಲ್ಲಿ 6 ಎಕರೆ ಪ್ರದೇಶವನ್ನು ಕೈಗಾರಿಕಾ ವಸಾಹತುವಿಗಾಗಿ ರೂ. 30.00 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದರಲ್ಲಿ 23 ನಿವೇಶನಗಳನ್ನು ಅಭಿವೃದ್ಧಿಪಡಿಸಿ ಹಂಚಿಕೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ಪ್ರಾರಂಭದಿಂದ ದಿನಾಂಕ 30–06–2007ರವರೆಗೆ ಒಟ್ಟು 1,212 ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳನ್ನು ನೋಂದಾಯಿಸಲಾಗಿದೆ.

ಮುದ್ದೇಬಿಹಾಳ ತಾಲ್ಲೂಕು, ಹೊಸ ಕೈಗಾರಿಕಾ ನೀತಿ 2006–2011ರ ಪ್ರಕಾರ ಅತೀ ಹಿಂದುಳಿದ ತಾಲ್ಲೂಕು ಎಂದು ಗುರುತಿಸಲಾಗಿದ್ದು ವಲಯ 1ರಲ್ಲಿ ಬರುವುದರಿಂದ, ಸಣ್ಣ ಕೈಗಾರಿಕೆಗಳಿಗೆ ಸ್ಥಿರ ಬಂಡವಾಳದ ಮೇಲೆ 25% ಸಹಾಯಧನ ಗರಿಷ್ಠ ಮಿತಿ ರೂ. 15.00 ಲಕ್ಷ, ಸಾಲ ಪತ್ರ ನೋಂದಣಿಯಲ್ಲಿ ಪೂರ್ಣ ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ ಮತ್ತು ರಿಯಾಯಿತಿ ನೋಂದಣಿ ಶುಲ್ಕ ಪೂರ್ಣ ಭೂಪರಿವರ್ತನಾ ಶುಲ್ಕ ಮನ್ನಾ – 50 ಎಕರೆ ಗರಿಷ್ಠ ಮಿತಿಯೊಂದಿಗೆ, ಘಟಕದ ಯಂತ್ರೋಪಕರಣಗಳ ಮೇಲಿನ ಪ್ರವೇಶ ತೆರಿಗೆ ಮೂರು ವರ್ಷಗಳ ಕಾಲ ವಿನಾಯಿತಿ. ಈ ಪ್ರಕಾರ ಕೈಗಾರಿಕಾ ಅಭಿವೃದ್ಧಿಗಾಗಿ ಸವಲತ್ತುಗಳನ್ನು ನೀಡಲಾಗಿದೆ.

(ಇ) ಹೌದು

(ಈ) ತಾಳಿಕೋಟೆ ಮುಖ್ಯ ರಸ್ತೆಯಲ್ಲಿ 26 ಎಕರೆ ಜಮೀನನ್ನು ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಹಂಚಿಕೆ ಮಾಡುವಂತೆ, ಆಯುಕ್ತರು, ಕರ್ನಾಟಕ ಗೃಹ ಮಂಡಳಿಯವರಿಗೆ, ಕೆ.ಎಸ್.ಎಸ್.ಐ.ಡಿ.ಸಿ. ಯವರು ದಿನಾಂಕ 21-06-2007 ರಲ್ಲಿ ಕೋರಿರುತ್ತಾರೆ.

866. **ಶ್ರೀ ಮುನಿಯಪ್ಪ ಎಸ್. ಎಂ. (ಚಿಕ್ಕಬಳ್ಳಾಪುರ)**:- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಗರ್ ಹುಕುಂ ಸಾಗುವಳಿ ಸಮಿತಿ ರಚನೆ ಮಾಡುವ ವಿಷಯ ಸರ್ಕಾರದ ಮುಂದೆ ಇದೆಯೇ;

(ಆ) ಹಾಗಿದ್ದಲ್ಲಿ, ಬಗರ್ ಹುಕುಂ ಸಾಗುವಳಿ ಸಮಿತಿಯನ್ನು ಯಾವಾಗ ರಚನೆ ಮಾಡಲಾಗುವುದು;

(ಇ) ಈಗಾಗಲೇ ಈ ಸಮಿತಿಗಳನ್ನು ಕೆಲವು ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಉಳಿದ ಕ್ಷೇತ್ರಗಳಲ್ಲಿ ಇನ್ನು ಇಂತಹ ಸಮಿತಿಗಳ ರಚನೆ ಆಗದಿರುವ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):-

(ಅ) ಹೌದು

(ಆ) 123 ತಾಲ್ಲೂಕುಗಳಿಗೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗಿದೆ. ಉಳಿದ ತಾಲ್ಲೂಕುಗಳ ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(ಇ) ಹೌದು, ಉಳಿದ ತಾಲ್ಲೂಕುಗಳ ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

774. **ಶ್ರೀ ರಮೇಶ್ ಕುಮಾರ್ ಕೆ. ಆರ್. (ಶ್ರೀನಿವಾಸಪುರ)**:- ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ನಿರ್ವಹಣೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

(ಆ) ಈವರೆವಿಗೂ ಎಷ್ಟು ಕೆರೆಗಳನ್ನು ಹೂಳೆತ್ತುವ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ;

(ಇ) ಈ ಪೈಕಿ ಎಷ್ಟು ಕೆರೆಗಳ ಪೋಷಕ ಕಾಲುವೆ (ಫೀಡರ್ ಚಾನಲ್) ತೋಬು ಕಾಲುವೆ, ಕೆರೆ ಕಟ್ಟೆ ದುರಸ್ತಿ ಕೆಲಸಗಳಿಗಾಗಿ ಈವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ (ವಿವರ ನೀಡುವುದು)?